MYSORE LEGISLATIVE ASSEMBLY

FORTY-SEVENTH DAY.

Wednesday, 1st July 1964.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Acquisition cases pending for village extention in Sagar and Sorab Taluks.

*Q.—223. Sri V. S. LAKSHMIKANTHAPPA (Sagar).

Will the Government be pleased to state :—

(*a*) the number of acquisition cases for village extension in Sagar and Sorab Taluks that are pending for the last three years (separate figures for each taluk may be furnished) ;

(*b*) the number of alienation cases sanctioned in favour of private parties with and without the consent of the concerned Village Panchayats separately from the past three years in the said Taluks ?

A.—Sri M. V. KRISHNAPPA (Minister for Revenue).—

(*a*).—

Year	*Name of Taluk*	*No. of cases pending*
1960-61	Sorab Taluk	3
1961-62	do	2
1962-63	do	3
1960-61	Sagar Taluk	Nil
1961-62	do	1
1962-63	do	Nil

(SRI M. V. KRISHNAPPA)

(*b*)—

Year	Total No. of alienation cases sanctioned.	With consent of the V. P. concerned	Without consent of the V. P. concerned.
	Sorab Taluk.		
1960-61	21	4	17
1961-62	6	6	...
1962-63	6	5	1
	Sagar Taluk.		
1960-61	2	2	...
1961-62	1	1	...
1962-63	3	...	8

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಸಾಗರ ಮತ್ತು ಸೊರಬ ತಾಲ್ಲೂಕುಗಳಲ್ಲಿ ಗ್ರಾಮ ಬಡಾವಣೆಗ ಗಿ ಭೂ ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಸಂಬಂಧ ಪಟ್ಟ ಪ್ರಕರಣಗಳು 3 ಎಂದು ಹೇಳಿದ್ದೀರಿ, ಅಲ್ಲಿ ಗ್ರಾಮ ಬಡಾವಣೆಗಾಗಿ ಗ್ರಾಮ ಪಂಚಾಯಿತಿಗೆ ಬರತಕ್ಕ ರೆಕಾರ್ಡುಗಳನ್ನು ಅದಕ್ಕೆ ಸಂಬಂಧಪಟ್ಟವರು ಗಮನಿಸದೆ ಇರುವುದರಿಂದ ಇಷ್ಟು ಕಡಿಮೆ ಮಾಡಿ ಅಂಕಿ ಅಂಶಗಳನ್ನು, ತಪ್ಪು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಹೆಂಡಿಂಗ್ ಕೇಸಸ್ ಯಾವ ಯಾವ ಸ್ಟೇಜಿನಲ್ಲಿವೆ ಎಂಬುದನ್ನು ತಿಳಿಸಿದ್ದಾರೆ. ಅಂಥಾ ಕೇಸುಗಳು ಜಾಸ್ತಿ ಇದ್ದು ಕಡಿಮೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರ ಅಭಿಪ್ರಾಯವೇ ?

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಗ್ರಾಮ ಬಡಾವಣೆಗಾಗಿ ಲ್ಯಾಂಡ್ ಅಕ್ವಿಜಿಷನ್ ಆಫೀಸಿಗೆ ಆರ್ಜಿಗಳನ್ನು ಹಾಕಿದರೂ ಅವುಗಳನ್ನು ರೆಕಾರ್ಡ್ ಮಾಡದೆ ಇರುವುದರಿಂದ ಅಂಕಿ ಅಂಶಗಳು ಕಡಿಮೆ ಕಾಣುತ್ತಿವೆ. ಅದ್ದರಿಂದ ಸರ್ಕಾರದವರು ಅವುಗಳನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ತಿಳುವಳಿಕೆಯನ್ನು ಕೊಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಗ್ರಾಮ ಬಡಾವಣೆಯ ಬಗ್ಗೆ ಪಂಚಾಯಿತಿಯ ರೆಸ್ಯೂಲ್ಯೂಷನ್ ಆಗಿ, ಅದಕ್ಕೆ ಅಮೌಂಟ್ ಕಟ್ಟಿ ಅಕ್ವಿಜಿಷನ್ ಆಗಬೇಕು ಎಂದು ಅಪ್ಲಿಕೇಷನ್ ಹಾಕಿದರೆ ಅದನ್ನು ಅವರು ರಿಸೀವ್ ಮಾಡಬೇಕು ಮತ್ತು ರಿಜಿಸ್ಟರ್ ಮಾಡಬೇಕು, ಒಂದು ವೇಳೆ ಅವರು ಆ ರೀತಿ ಮಾಡದೇ ಇದ್ದರೆ ಅವರು ಶಿಕ್ಷಾರ್ಹರು.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—(ಬ) ಪ್ರಶ್ನೆಗೆ ಉತ್ತರವಾಗಿ ಗ್ರಾಮ ಪಂಚಾಯಿತಿಗಳ ಅನುಮತಿ ಇಲ್ಲದೆ, ಸೊರಬ ತಾಲ್ಲೂಕಿನಲ್ಲಿ ಗ್ರಾಮ ಬಡಾವಣೆಗೆ ಎಲನೇಷನ್ ಸರ್ಟಿಫಿಕೇಟನ್ನು ಖಾಸಗಿಯವರಿಗೆ 17 ಜನಗಳಿಗೆ ಕೊಟ್ಟಿದೆ, ಮತ್ತು ಸಾಗರದಲ್ಲಿ 3 ಜನಗಳಿಗೆ ಕೊಟ್ಟಿದೆ ಎಂದು ಹೇಳಿದ್ದೀರಿ, ಈ ರೀತಿ ಕೊಡತಕ್ಕಂಥ ಕ್ರಮದಿಂದ ಗ್ರಾಮ ಪಂಚಾಯಿತಿಯ ಅಭಿವೃದ್ಧಿಗೆ ಧಕ್ಕೆ ಬರುತ್ತದೆ. ಆದ್ದರಿಂದ ಇನ್ನು ಮುಂದಾದರೂ ಇಂಥ ಕ್ರಮವನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಎಲನೇಷನ್ ನಡೆಯುತ್ತದೆ. ಈಗ ಅನೇಕ ಪಂಚಾಯಿತಿಗಳಲ್ಲಿ ಪಂಚಾಯಿತಿಯೇ ಆಗಿದೆ. ಅಲ್ಲಿ ಒಬ್ಬರಿಗೊಬ್ಬರಿಗೆ ಮನಸ್ತಾಪ ಬಂದು ವಿರೋಧಪಕ್ಷದವರಿಗೆ ಎಲನೇಷನ್ ಸರ್ಟಿಫಿಕೇಟನ್ನು ಕೊಡುವುದಕ್ಕೆ ಮನಸ್ಸನ್ನೇ ಕೊಡುವುದಿಲ್ಲ. ಹೀಗಾಗಿ ಎಲನೇಷನ್ ಸ್ಯಾಂಕ್ಷನ್ ಆಗುವುದಿಲ್ಲ. ಒಪ್ಪಿಗೆ ಕೊಡುವುದಿಲ್ಲ. ಈ ವಿಷಯದಲ್ಲಿ ಹೈಯ್ಯರ್ ಆಫೀಸರು ಡಿಸ್‌ಕ್ರಿಷನ್ ಇಟ್ಟುಕೊಳ್ಳದೇ ಇದ್ದರೆ ಅದರಲ್ಲಿ ತೊಂದರೆಯಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕೆಲವು ಸಂದರ್ಭಗಳಲ್ಲಿ ಪಂಚಾಯ್ತಿಗಳಲ್ಲಿ ಹಣ ಇರುವುದಿಲ್ಲ ಆದರೆ ಜಾಗ ಅಗತ್ಯವಾಗಿ ಬೇಕಾಗುತ್ತದೆ. ಅಂಥಾ ಸಂದರ್ಭದಲ್ಲಿ ಜಾಗವನ್ನು ಸರ್ಕಾರದವರೇ

ಅಕ್ವೈರ್ ಮಾಡಿಕೊಂಡು ಅದಕ್ಕೆ ಹಣವನ್ನು ಕಟ್ಟಬೇಕು, ಆ ನಂತರ ಆ ಜಾಗದಲ್ಲಿ ಸೈಟುಗಳನ್ನು ವಿಂಗಡಿಸಿ ಅದನ್ನು ಜನಗಳಿಗೆ ಕೊಟ್ಟು ಅವರಿಂದ ಹಣವನ್ನು ವಸೂಲು ಮಾಡಿಕೊಂಡು ಜನಗಳಿಗೆ ಅನುಕೂಲ ಮಾಡಿಕೊಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪಂಚಾಯಿತಿಯಲ್ಲಿ ಹಣ ಇರುವುದಿಲ್ಲ. ಕೆಲವು ಜಮೀನಿನ ವಿಷಯದಲ್ಲಿ ಜಗಳ ಇರುತ್ತದೆ. ಆದ್ದರಿಂದ ಜಾಗ ಬೇಕು ಎಂದು ಹೇಳಿದರೂ ಅವರು ಒಪ್ಪುವುದಿಲ್ಲ. ಸಾಮಾನ್ಯವಾಗಿ ಪಂಚಾಯಿತಿಯ ಚೇರ್ಮನರು, ಗೌಡರು ಮತ್ತು ಶ್ಯಾನುಭೋಗರೇ ಇರುತ್ತಾರೆ. ಅಲ್ಲಿ ಅವರದೇ ಭೂಮಿ ಇರುತ್ತದೆ. ಆದ್ದರಿಂದ ಅವರು ಆ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಒಪ್ಪುವುದಿಲ್ಲ. ಆಗ ಪಂಚಾಯಿತಿಯವರು ಅದು ಬೇಕಾಗಿಲ್ಲ ಎಂದು ಬರೆಯುತ್ತಾರೆ. ಆಂಥಾ ಸಂದರ್ಭದಲ್ಲಿ ಸರ್ಕಾರದವರೇ ಆ ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಆಮೇಲೆ ಅದನ್ನು ಜನಗಳಿಗೆ ಕೊಡಬೇಕಾಗುತ್ತದೆ.

Appointment of Non-official persons as Government Nominates in the Board of Directors of several private industrial undertakings.

*Q.—260. Sri GANGADHAR NAMOSHI (Gulbarga).—

Will the Government be pleased to state :—

(*a*) whether they have appointed non-official persons as Government nominees, in the Board of Directors of the following private Industrial undertakings, namely, A.C.C. Shahbad, Binny Mills, Bangalore, Cement Factory at Bagalkot and Dandeli Paper Mills ;

(*b*) if so, the details regarding the number and names of persons so appointed ?

A.—Sri K. MALLAPPA (Minister for Industries and Commerce).—

(*a*) Yes. Only in respect of the Associated Cement Company Ltd., Shahbad.

(*b*) Sri Mohamad Ali has been nominated on the Board of the Associated Cement Company Ltd., Shahbad.

ಶ್ರೀ ಗಂಗಾಧರ ನಾಮೋಷಿ.—ಸ್ವಾಮಿ, ಬೇರೆ ಯಾವ ಕೈಗಾರಿಕೆಗಳಲ್ಲೂ ಸರ್ಕಾರದವರ ಪರವಾಗಿ ನಾನ್ ಅಫಿಷಿಯಲ್ ಮೆಂಬರು ಇಲ್ಲ. ಆದರೆ ಷಹಾಬಾದ್‌ನಲ್ಲಿರುವ ಆಸೋಸಿಯೇಟೆಡ್ ಸಿಮೆಂಟ್ ಕಂಪೆನಿಯ ಆಡಳಿತ ಮಂಡಲಿಗೆ ನಾನ್ ಅಫಿಷಿಯಲ್ ಮೆಂಬರನ್ನು ನೇಮಕ ಮಾಡಿದ್ದಾರೆ ಅದಕ್ಕೆ ಕಾರಣವೇನು ?

† ಶ್ರೀ ಕೆ. ಮಲ್ಲಪ್ಪ.—ಈಗ ಬಿನ್ನಿ ಮಿಲ್ಲಿಗೆ ಮಾತ್ರ ಡೈರೆಕ್ಟರನ್ನು ನಾಮಕರಣ ಮಾಡುವುದಕ್ಕೆ ಸರ್ಕಾರದವರಿಗೆ ಅಧಿಕಾರ ಇದೆ. ಬಾಗಲಕೋಟೆಯಲ್ಲಿರುವ ಸಿಮೆಂಟ್ ಕಾರ್ಖಾನೆಗೆ ಮತ್ತು ದಾಂಡೇಲಿಯಲ್ಲಿರುವ ಕಾಗದದ ಕಾರ್ಖಾನೆಗಳಿಗೆ ಡೈರೆಕ್ಟರನ್ನು ಸರ್ಕಾರದವರು ನಾಮಕರಣ ಮಾಡತಕ್ಕ ಅಧಿಕಾರವಿಲ್ಲ. ಈಗ ಬಿನ್ನಿ ಮಿಲ್ಲಿಗೆ ಚೆಕ್ಸ್‌ಟೈಲ್ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಶೇಷಾದ್ರಿ ಎಂಬುವರನ್ನೂ ಮತ್ತು ಸಿರಿಕಲ್ಚರ್ ಮತ್ತು ಸಿಲ್ಕ್ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಗುಂಡೂರಾಜ್ ಎನ್ನುವವರನ್ನೂ ನಾಮಕರಣ ಮಾಡಿದೆ. ಮತ್ತು ಗುಲ್ಬರ್ಗಾ ಡಿಸ್ಟ್ರಿಕ್ಟಿನ ಷಹಾಬಾದ್‌ನಲ್ಲಿರುವ ಸಿಮೆಂಟ್ ಕಂಪೆನಿಗೆ ಶ್ರೀ ಮಹಮದಾಲಿಯವರು ಗುಲ್ಬರ್ಗಾ ಡಿಸ್ಟ್ರಿಕ್ಟಿನ ಒಬ್ಬ ಪಬ್ಲಿಕ್ ವರ್ಕರ್ ಮತ್ತು ಜನರ ಕಷ್ಟ ಸುಖಗಳನ್ನು ಚೆನ್ನಾಗಿ ಅರಿತುಕೊಂಡಿರತಕ್ಕವರು ಎಂದು ಭಾವಿಸಿ ಅವರನ್ನು ಅಲ್ಲಿಗೆ ನಾಮಕರಣ ಮಾಡಿದೆ.

Sri B. P. KADAM.—Is this Sri Mohamed Ali the same gentleman who is the President of the M. P. C. C. ?

† Indicates that the remarks or speeches have not been revised by the member concerned.